


ಕಾವೇರಿ ದೊಡ್ಡಮ್ಮ.

ಎಲ್ಲಾ ಮಲಾಮತ್ತೇ.... ಏನಿದು ಈ ಮುದುಕ ಮುದುಕಿಯರ ಪರಿಸ್ಥಿತಿ, ಬವಣೆ, ತೊಳಲಾಟ ಎಂದೆಲ್ಲ ಊಹಿಸುತ್ತ ಅಂಗಳ ದಾಟಿ ಜಗುಲಿಯ ಮೆಟ್ಟಿಲೇರಿ ಸಾಗುತ್ತಿದ್ದಾಗ ಕಿಸ ಕಿಸ ನಗಬೇಕೆ ಜೊತೆಗೂಡಿ ಈ ಗಂಧವೇ ಲೋಕದ ಹಳಬರು....! ಸ್ವಲ್ಪ ಹೊತ್ತಿನ ಮೊದಲು 'ಕಿಸ್ ಕಿಸ್' ಎಂದು ಕಂಗಾಲಾಗಿದ್ದ ಗೋವಿಂದಜ್ಜ.... ಮತ್ತೆ ಅದನ್ನೆಲ್ಲ ಸಂಗಾತಿಗೆ ಹೇಳಿದ್ದ ಹಳಬ... ಕೇಳಿಸಿಕೊಂಡ ಕಾವೇರಿ ದೊಡ್ಡಮ್ಮ ಎಂಬ ಅಪ್ಸರ ಲೋಕದ ಜೊತೆಗಾತಿ..!

ಕಣ್ಣೆದುರೇ ಹುಟ್ಟಿ ಬೆಳೆದ ನನ್ನನ್ನು ಅವರ ಕತೆಗಾರಿಕೆಗೆ ಮನಸೋತ ಈ ಕತೆಗಾರನನ್ನು ಕಂಡವರೇ 'ಗಾಬರಿಯಾಯಿತಾ ಅಣ್ಣಯ್ಯ ಹಾಗೆಂದು ಹಿಂಬಾಲಿಸಿ ಬಂದೆಯಾ..' ಎಂದು ಹೂ ಅರಳಿದಂತೆ ನಗತೊಡಗಿದರು ಗೋವಿಂದಜ್ಜ. ನನಗಿಂತ ಹೆಚ್ಚು ಗಾಬರಿಯಾಗುವ ಸರದಿ ಈಗ ಕಾವೇರಿ ದೊಡ್ಡಮ್ಮನದು. ನನ್ನನ್ನು ಅನಿರೀಕ್ಷಿತವಾಗಿ ಕಂಡದ್ದರಿಂದ ಮದುಮಗಳಂತೆ ಎದ್ದವರೆ ಅವಸರದಿಂದ ಪಡಸಾಲೆ ಕಡೆಗೆ ನಡೆಯುತ್ತ ಆ ತಗ್ಗು ಬಾಗಿಲನ್ನು ಮೃದುವಾಗಿ ದೂಡಿ ಒಳನುಸುಳಿ ಬಾಗಿಲ ಸಂದಿಯಲ್ಲೇ ಇಣುಕತೊಡಗಿದರು – ಸೆರಗಿನ ತುದಿಯನ್ನೆ ಗಲ್ಲಕ್ಕೆ ಪರದೆಯಾಗಿಸಿ....

'ಬಾರಯ್ಯಾ ಬಾ... ಕುಳಿತುಕೊ. ದಣಿವಾಗಿದೆಯಾ... ಇಗ ಕಾವೇರಿ.... ಮಾಣಿಗೆ ಆಸರಿಗೆ (ಕುಡಿಯಲು) ಏನಾದರೂ ತಾ' ಎಂದು ಹೇಳಿ ಬಳಿಯಲ್ಲಿ ಕುಳಿತ ನನ್ನ ನಡುವಯಸ್ಸಿನಲ್ಲಿರುವ ಅವರ ಪ್ರೀತಿಯ ಅಣ್ಣಯ್ಯನ ಕೈ ಸವರುತ್ತ ಮಾತು ಮುಂದುವರಿಸುವ ಪ್ರಯತ್ನ ಮಾಡಿದರು. ಪ್ರವಚನ ಮಂದಿರದಲ್ಲಿ ಕೈ ಹಿಡಿದಾಗ ಬಿಸಿಯಾಗಿದ್ದ ಅವರ ಅಂಗೈ ಈಗ ತಂಪಾಗಿದೆ.. ಹನಿ ಮಳೆ ಹೀರಿದ ನೆಲದಂತೆ.

ಮಾತಿನ ಸಾರಾಂಶ ಇಷ್ಟೆ. ಪಾಯಸ ಬೇಡಿದ ಪುಟ್ಟ ಧ್ರುವನಂತಿದ್ದ ನಾನು ಅವರ ಕಣ್ಣೆದುರೇ ಬೆಳೆದು ಹೈಸ್ಕೂಲು ದಾಟಿ ದೂರದ ನಗರದ ಕಾಲೇಜಿನಲ್ಲಿ ಕಲಿಯ ತೊಡಗಿದೆನಲ್ಲ... ಆಗ ಗೋವಿಂದಜ್ಜನಿಗೆ ನಡುವಯಸ್ಸು ದಾಟಿರಲೇಬೇಕು. ಕಾವೇರಿ ದೊಡ್ಡಮ್ಮ ಮತ್ತವರ ದಾಂಪತ್ಯ ಸಾಕಷ್ಟು ದೂರ ಸಾಗಿರಲೇಬೇಕು... ಸಂತಾನವಿಲ್ಲದ ಕೊರಗಿನ ನಡುವೆಯೇ...ನನ್ನಂಥ ಚಿಗುರು ಮೀಸೆಯ ಅಕ್ಕಪಕ್ಕದವರನ್ನೆಲ್ಲ ಪುಟ್ಟ, ಮಗ, ಮಾಣಿ ಎಂದು ಮಮತೆ ತೋರಿಸುತ್ತ....

ಆಗ ಒಂದು ದಿನ ಕಾಲೇಜು ದಿನಗಳ ಹೊಸತು. ಆವೇಶ... ಎಳಸು ಬುದ್ಧಿ... ಪಾಯಸದ ಕಥೆಯಂತೆ ಮರೆವಷ್ಟು ಬಾಲ್ಯವಲ್ಲ. ಎಲ್ಲ ನೆನಪಾಗುತಿದೆ ಎಂಬಂಥ ಯೌವನದ ಕಾವು.... ಪಾರಾಯಣಕ್ಕೆಂದೇ ಬಂದ ಗೋವಿಂದಯ್ಯನವರನ್ನು ಸಲುಗೆಯಿಂದ ಛೇಡಿಸುತ್ತ ನಾನು ಕೇಳಿದ್ದೆ – ಗೋವಿಂದಜ್ಜ ನೀವು ದೊಡ್ಡಮ್ಮನಿಗೆ 'ಕಿಸ್ ಕೊಡುತ್ತೀರಾ....' ಕಾಲೇಜು ಓದಿನ ಪ್ರಭಾವದಿಂದ ನಗುತ್ತ ಕೇಳಿದ್ದೆ.... 'ನಿಮ್ಮ ಹೆಂಡತಿಗೆ ಕಿಸ್?'

ಕೇಳುವುದು ಕೇಳಿಬಿಟ್ಟೆ ಏನೋ ಕುತೂಹಲದಿಂದ ಅಜ್ಜ ಸಿಟ್ಟಿನಿಂದ ಕೆರಳಿ ದೊಡ್ಡ ರಾದ್ಧಾಂತವಾದೀತು ಎಂಬ ಭಯ ಕಾಡಿದ್ದರಿಂದ 'ಹೋ ಹೋ' ಎಂದು ಕೃತಕವಾಗಿ ನಗುತ್ತ ಅವರ ಕೈಗಳಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಿದ್ದೆ. ನೆನಪಿದೆ ಹಾಗೇನೂ ಆಗಿರಲಿಲ್ಲ. ಬದಲು ಅವರು ನಗುತ್ತ 'ಘಟಿಂಗ, ಇದನ್ನೆಲ್ಲ ಕಲಿಯುವುದಕ್ಕೆ ನೀನು ಕಾಲೇಜು ಸೇರಿದ್ದಾ' ಎಂದು ಬೆನ್ನಿಗೆ ಹೂಪೆಟ್ಟು ನೀಡಿದ್ದು ನೆನಪಿದೆ.

ವರ್ತಮಾನ ಭೂತ ಭವಿಷ್ಯವೆಲ್ಲ ಒಟ್ಟಾಗುವ ಕ್ಷಣವೆಂದರೆ ಹೀಗೇ ಅಲ್ಲವೇ...

ಈಗ ಮತ್ತೊಂದು ಪೆಟ್ಟುಕೊಡುತ್ತ... ಅಲ್ಲಿ ಪ್ರವಚನ ಮಂದಿರದಲ್ಲಿ ಗಾಬರಿಯಾಗಿ ಕಾಣಬಾರದ್ದು ಕಂಡೆ ಎಂದು ಭಯಂಕರ ತೊಳಲಾಡಿದ್ದು ನಿಜ ಅಣ್ಣಯ್ಯ.... ದಾರಿಯುದ್ದಕ್ಕೂ ಒದ್ದಾಡಿದೆ. ಆಕಸ್ಮಿಕವಾಗಿ ನೀನಲ್ಲಿ ರಕ್ಷಣೆಯಾಗಿ ಸಿಕ್ಕಿ 'ಗಾಬರಿಯಾಕೆ.... ಗೋವಿಂದಜ್ಜ' ಎಂದದ್ದರಿಂದಲೋ ಏನೋ ... ಮನೆ ಹತ್ತಿರ ಬರುವಾಗ ಸಮುದ್ರದ ನಡುವೆ ತೆರೆ ಶಾಂತವಾದಂತೆ ಎಲ್ಲ ಶಾಂತವಾಯಿತು. ನಿನ್ನ ಕಾವೇರಿ ದೊಡ್ಡಮ್ಮನ ಮುಖ ನೋಡಿದ ಪರಿ. ಎಲ್ಲ ದುಗುಡ ಮರೆಯಾಯಿತು. ಅಣ್ಣಯ್ಯ ನಿನ್ನ ದೊಡ್ಡಮ್ಮನಿಗೆ ಒಂದು ಹೂ ಮುತ್ತು ಕೊಟ್ಟುಬಿಟ್ಟೆ. ಯಾವತ್ತೋ ಈ ಅಜ್ಜನನ್ನು ಕೇಳಿದ್ದು ನೀನೇ ಅಲ್ಲವೆ, ಹೆಂಡತಿಗೆ ಕಿಸ್ ಕೊಡ್ತೀರಾ ಎಂದು? ಆ ವಿದೇಶಿ ಬಿಳಿಯವಳು ಹುಡುಗನ ಕೈ ಹಿಡಿದು ಅಮುಕುತ್ತ 'ಕಿಸ್ ಕೊಟ್ಟಂತೆ ನಾನೂ ನನ್ನ ಕಾವೇರಿಗೆ...'

ಮಾತು ಅರ್ಧಕ್ಕೆ ನಿಂತಿತು. ಕಾರಣ ರಂಗಪ್ರವೇಶದ ನರ್ತಕಿ ರಂಗಕ್ಕೆ ಬಂದಂತೆ ಪಡಸಾಲೆ ಬಾಗಿಲನ್ನು ದೂಡಿ ಹಾಲು ತುಂಬಿದ ಬೆಳ್ಳಿ ಲೋಟ ಸಹಿತ ಕಾವೇರಿ ದೊಡ್ಡಮ್ಮ ನಾಚಿ ಮುದ್ದೆಯಾಗಿ ಹೊರ ಬಂದವರೆ ಅಬ್ಬರಿಸಿದರು. 'ಎಂಥ ನಿಮ್ಮ ಕುಶಾಲು ಮಾಣಿಯ ಮುಂದೆ?' ಎಷ್ಟೆ ಅಬ್ಬರಿಸಿದ್ದರೂ ಮಾತು ಎಷ್ಟು ಮೃದುವಾಗಿತ್ತು... ಸುಂದರವಾದ ಮಡಕೆಯಾಗಲು ಚಕ್ರದ ಸುತ್ತಿನೊಳಗೆ ಒಂದಾಗುವ ಮೃದು ಮಣ್ಣಿನಂತೆ. ಬಿರುಸು, ಮೃದುತ್ವ, ಬಣ್ಣಗಾರಿಕೆ, ಬಂಧ.. ಎಲ್ಲ ಒಟ್ಟಾದಂತೆ.

ಹೋಯ್ ಕಥೆ ಮುಗಿದಿಲ್ಲ. ಈ ಗಮ್ಮತ್ತಿನಲ್ಲಿಯೇ ಅವರಿಬ್ಬರು ಭಗವಂತನ ಪಾದ ಸೇರಿದರು. ಎಂದೆಲ್ಲ ಕಥೆ ಮುಗಿಸುತ್ತೆನೆ ಎಂದು ತಿಳಿಯಬೇಡಿ.... ಭವಿಷ್ಯ ನಿರಂತರವಲ್ಲವೇ, ಕೇಳಿ..

ಗೋವಿಂದಜ್ಜ ಮತ್ತು ಪ್ರವಚನವನ್ನಾಲಿಸಲು ತೆರಳಲೇ ಇಲ್ಲ. ಗುರುಗಳೇ ಹೇಳಿ ಕಳುಹಿಸಿದರೂ ಏನೇನೋ ಸಬೂಬು ಹೇಳಿ ಗುರುಗಳು ಗೋವಿಂದಜ್ಜನನ್ನು ಮರೆಯುವಂತೆ ಮಾಡುವಲ್ಲಿ ಯಶಸ್ವಿಯಾದರು. ಗುರುಗಳಿಗೆ ಈ ಗೋವಿಂದಯ್ಯ ಒಬ್ಬರೇ ಹಿಂಬಾಲಕರಲ್ಲವಲ್ಲ. ಆದರೆ ಗೋವಿಂದಯ್ಯನಿಗೆ ಒಂದು ವಿಷಯವನ್ನು ತಿಳಿಸುವ ಪ್ರಮೇಯ ನನಗೊದಗಿ ಬಂದಾಗ ತಿಳಿಸದೆ ಹೇಗೆ ತಪ್ಪಿಸಿಕೊಳ್ಳಲಿ ಹೇಳಿ.... ಮತ್ತೇನಲ್ಲ. ಗೋವಿಂದಜ್ಜ ಪ್ರವಚನಕ್ಕೆ ಬರದಿದ್ದರೂ ಮರುದಿನದಿಂದ ನಾನು ತಪ್ಪದೇ ಕ್ಲಿಪ್ತ ಸಮಯಕ್ಕೆ ಸರಿಯಾಗಿ ಹೋಗಿ ಆಲಿಸತೊಡಗಿದೆ. ಅಷ್ಟು ಕುತೂಹಲಕಾರಿಯಾಗಿತ್ತು ಆ ಮಹನೀಯರ ಕಥಾವೈಖರಿ.

ತಿಂಗಳ ಕಾಲ ಅಂದರೆ ಪಾಂಡವರ ಮಹಾಪ್ರಸ್ಥಾನದವರೆಗೂ ನಡೆದು ಮುಕ್ತಾಯಗೊಂಡ ದಿನಗಳಲ್ಲೇ ಗೋವಿಂದಯ್ಯನನ್ನು ಗಲಿಬಿಲಿಗೊಳಿಸಿದ ಚುಂಬನದ ಜೋಡಿ ತಪ್ಪದೆ ಬರುತ್ತಿದ್ದುದನ್ನು ಗೋವಿಂದಜ್ಜನಿಗೆ ನಾನು ಹೇಳಲೇಬೇಕಲ್ಲ.

ಯಾರು ಎಚ್ಚರಿಸಿದರೋ ಅಥವಾ ಅವರ ತಿಳಿವಳಿಕೆ ಪಕ್ವಗೊಂಡಿತೊ.... ಪ್ರವಚನ ಮಂದಿರದಲ್ಲಿ ಮತ್ತೆ ಚೆಲ್ಲಾಟ ನಡೆಸಲೇ ಇಲ್ಲ. ಬದಲು, ಆ ಬದಿಯ ಕುರ್ಚಿಗಳಲ್ಲಿ ಕುಳಿತುಕೊಳ್ಳದೆ ಗೋವಿಂದಜ್ಜ ಮತ್ತವರ ಓರಗೆಯವರು ಕುಳಿತಂತೆ ನೆಲದಲ್ಲಿ ಕುಳಿತುಕೊಳ್ಳುತ್ತಿದ್ದ ಆ ಜೋಡಿ ಶ್ರದ್ಧೆಯಿಂದ ಕೇಳಿದ್ದನ್ನೆಲ್ಲ.. ಅರಿವಾದಷ್ಟು ಟಿಪ್ಪಣಿ ಮಾಡಿಕೊಳ್ಳುತ್ತ, ಅರಿವಾಗದ್ದನ್ನು ಪರಿಣತರಿಂದ ಪಾಠ ಹೇಳಿಸಿಕೊಳ್ಳುತ್ತ ತಿಂಗಳ ನಂತರ ವಿದೇಶದ ತಮ್ಮೂರಿಗೆ ಹೊರಟಿದ್ದನ್ನು ಗೋವಿಂದಜ್ಜನಿಗೆ ನಾನಲ್ಲದೆ ಇನ್ನಾರು ಹೇಳುವುದು... ಹೇಳಲೆಂದೆ ಆ ಹಳೆಯ ಮನೆಗೆ ಹೋದೆ.

'ಗೋವಿಂದಜ್ಜ.... ಓ ಅವತ್ತು 'ಕಿಸ್ ಕಥೆ' ನಡೆಸಿದ್ರಲ್ಲ ನಿಮ್ಮ ಆ ವಿದೇಶಿ ಜೋಡಿ, ಅವರ ಪರಿಚಯ ನನಗೂ ಆಯಿತು... ವಿಷಯ ಏನು ಗೊತ್ತಾ? ನನ್ನ 'ಈ ಮೈಲ್' ಎಲ್ಲ ಪಡೆದು ಅವರು ಊರಿಗೆ ಹೋದವರೆ ಆಗಾಗ್ಗೆ ನನ್ನನ್ನು ಸಂಪರ್ಕಿಸಿ ಪ್ರವಚನದ ಒಳಹೊರಗುಗಳನ್ನು ಇನ್ನಷ್ಟು ತಿಳಿದುಕೊಳ್ಳುತ್ತಿದ್ದಾರೆ.... ಹೋಗುವ ಮೊದಲು ಗುರುಗಳಿಂದ ಆಧ್ಯಾತ್ಮ ದೀಕ್ಷೆ' ಪಡೆದು ಹೋಗಿದ್ದರಂತೆ. ನಿಮಗಾದ ಗಾಬರಿಯನ್ನೂ ಅವರಿಗೆ ತಿಳಿಸಿದ್ದೇನೆ ಗೋವಿಂದಜ್ಜ.... ಇಗೊಳ್ಳಿ ನಿನ್ನೆ ಬಂದ ಮೈಲಿನಲ್ಲಿ ನಿಮ್ಮ ಆಶೀರ್ವಾದ ಕೇಳಿದ್ದಾರೆ.... ಮತ್ತೆ ನಿಮಗೆ ತಿಳಿಸಬೇಕಂತೆ.... ನಿಮ್ಮ ಗೋವಿಂದಜ್ಜ ಕಾವೇರಿ ದೊಡ್ಡಮ್ಮನ ಹಾಗೆ ದಂಪತಿಗಳಾಗಲಿರುವ ಅವರಿಗೆ ನಿಮ್ಮ ಆಶೀರ್ವಾದ ಬೇರೆ ಬೇಕಂತೆ... ಹಾಂ, ಮತ್ತೊಂದು ವಿಷಯ. ಹುಟ್ಟುವ ಮಗುವಿಗೆ 'ವ್ಯಾಸ' ಅಂತ ಹೆಸರಿಡುತ್ತಾರಂತೆ.

ಗೋವಿಂದಯ್ಯ ಭವಿಷ್ಯದ ನಗು ನಗುತ್ತ ಕೈ ಎತ್ತಿ ಕಾಣದ ಲೋಕದ ಆ ದಂಪತಿಗಳಿಗೆ ಒಳ್ಳೆಯದಾಗಲಿ ಎನ್ನುತ್ತಿರುವಾಗಲೇ ಎಲ್ಲವನ್ನೂ ಕೇಳಿಸಿಕೊಂಡ ಕಾವೇರಿ ದೊಡ್ಡಮ್ಮ ಆಕ್ಷೇಪದ ಧ್ವನಿಯಲ್ಲಿ 'ಹೆಣ್ಣು ಹುಟ್ಟಿದರೆ ಏನು ಮಾಡುತ್ತಾರಂತೆ. ಕೇಳಾ ಅಣ್ಣಯ್ಯ ಇವರ ಕಿಸ್ ಕಿಸ್ ಜೋಡಿಗಳನ್ನು...' ಎಂದು ಅಬ್ಬರಿಸಿದಾಗ ಏಕೋ ನನಗೆ ನಗುವುದಕ್ಕಾಗಲಿಲ್ಲ. ನಂತರ ಮೌನಿಯಾಗಿ ನಿಟ್ಟುಸಿರಿನೊಂದಿಗೆ ಅದೇ ಪಡಸಾಲೆಯೊಳಗೆ ಕಾಲಗರ್ಭದೊಳಗೆ ಸೇರಿ ಮರೆಯಾಗುವಂತೆ ಒಳಸರಿದ ಕಾವೇರಿ ದೊಡ್ಡಮ್ಮನ ಬಾಳಿನ ಸಂಜೆಯ ಬಾಡಿದ ಮುಖವನ್ನೆ ಸ್ಮರಿಸುತ್ತ ಬಹು ಹೊತ್ತು ಮೌನಿಯಾದೆ. ನಾನು ಮಾತ್ರವಲ್ಲ...ಗೋವಿಂದಜ್ಜನೂ.